ನನಗೆ ನೀಡಿದ ಕಾಣಿಕೆ" ಎಂದು ತನ್ನ ತಾಯಿಯೊಡನೆ ಸುಳ್ಳು ಹೇಳಿದಳು. ಕೆಲವು ದಿನಗಳ ನಂತರ ನಿಜವಾದ ವಿಷಯ ಶ್ಯಾಮಲಳ ತಾಯಿಗೆ ತಿಳಿಯಿತಾದರೂ, ಅವಳು ಆ ಬಗ್ಗೆ ಮೌನ ತಾಳಿದಳು.

**a) i)** ಶ್ಯಾಮಲಳ ಈ ವರ್ತನೆ ಸರಿಯೇ? (ನಿನಗೆ ಮೆಚ್ಚಿತೆ?)

**ii)** ಏಕೆ?

**b) i)** ಶ್ಯಾಮಲಳ ತಾಯಿಯ ವರ್ತನೆ ಸರಿಯೆ?

**ii)** ತಾಯಿ–ಮಗಳು ಪ್ರಾಮಾಣಿಕರಾದರೇ?

**c)** ಒಂದು ವೇಳೆ ನೀನು ಶ್ಯಾಮಲಳ ಗೆಳತಿಯಾಗಿದ್ದರೆ, ನೀನು ಅವಳಿಗೆ ಕೊಡುವ ಬುದ್ಧಿವಾದ ಏನು? ಎರಡು ಸಲಹೆ ಬರೆ.

2. ಚರಣ್ ಪ್ರತಿಭಾವಂತ ವಿದ್ಯಾರ್ಥಿ. ಅವನಿಗೆ ಸಂಗೀತದಲ್ಲಿ, ಚಿತ್ರಕಲೆಯಲ್ಲಿ ವಿಶೇಷ ಆಸಕ್ತಿ. ಅವನು ಮನೆಯಲ್ಲಿ ಒಬ್ಬನೇ ಸಂಗೀತ ಹಾಡುವನು, ಆಲಿಸುವನು, ಮನೆಯಲ್ಲಿ ವಿವಿಧ ಚಿತ್ರಕಲೆ ಬಿಡಿಸುವನು. ಅಂತೆಯೇ ಕಥೆ ಪುಸ್ತಕ ಓದುವುದು, ಅಂಚೆ ಚೀಟಿ ಸಂಗ್ರಹಿಸುವುದು ಅವನ ಹವ್ಯಾಸ. ಆದರೆ ಶಾಲೆಯಲ್ಲಿ ನಡೆಯುವ ಯಾವುದೇ ಪ್ರತಿಭಾ ಸ್ಪರ್ಧೆಗಳಲ್ಲಿ ಅವನು ಭಾಗವಹಿಸಲಾರನು, ಯಾರಿಗೂ ಸಹಾಯ ಕೂಡ ಮಾಡಲಾರನು.

**a) i)** ಚರಣನು ಶಾಲೆಯಲ್ಲಿ ಸ್ಪರ್ಧೆಗಳಲ್ಲಿ ಭಾಗವಹಿಸದಿರುವುದು ಸರಿಯೇ?

**ii)** ಚರಣನಲ್ಲಿರುವ ಪ್ರತಿಭೆಗಳಾವುವು?

**b) i)** ಚರಣನು ತನ್ನ ಪ್ರತಿಭೆಗಳನ್ನು ಪ್ರದರ್ಶಿಸಬೇಕೇ?

**ii)** ಏಕೆ?

**c) i)** ನಿನ್ನಲ್ಲಿರುವ ಪ್ರತಿಭೆಗಳಾವುವು?

**ii)** ಇತರರ ಪ್ರತಿಭೆಗಳನ್ನು ಪ್ರದರ್ಶಿಸಲು ನೀನು ಹೇಗೆ ಪ್ರೋತ್ಸಾಹಿಸುವೆ?



# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 11–01–2020** **ಸಮಯ : $2^1/_2$ ಘಂಟೆ**

**ತರಗತಿ : VII** **ಅಂಕ : 80**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

**I. ಆವರಣದಿಂದ ಸೂಕ್ತ ಉತ್ತರ ಆರಿಸಿ ಬರೆಯಿರಿ:** **10x1=10**

1. ಕೊರತೆಯುಳ್ಳವರಿಗೆ ಸೇವೆ ಸಲ್ಲಿಸುವುದು ಎಂದರೆ ಅದು ________ ಸಲ್ಲಿಸಿದಂತೆ.
(ದೇಶಕ್ಕೆ; ಪ್ರತಿಭೆಯುಳ್ಳವರಿಗೆ; ದೇವರಿಗೆ)
2. ನಾವು ಪ್ರತಿಪಾದಿಸುವ ಮತ್ತು ನಂಬುವ ಗುಣ ________
(ಮೌಲ್ಯ; ಸಂಪತ್ತು; ಸೌಂದರ್ಯ)
3. ಹಂಚಿಕೊಳ್ಳುವುದರಿಂದ ಸಂತೋಷ ________ ವಾಗುತ್ತದೆ.
(ಕಡಿಮೆ; ಅಧಿಕ; ಸಮ)
4. ಸೌಕರ್ಯ ಮತ್ತು ಎಲ್ಲಕ್ಕೂ ಮಿಗಿಲಾಗಿ ________ ಬೆಲೆಯುಳ್ಳದ್ದು.
(ಸಂತೋಷ; ಹಾನಿ; ಸ್ವಾತಂತ್ರ್ಯ)
5. ________ ಎಂದರೆ ಸಂತೃಪ್ತಿಯಿಂದಿರುವ ಸ್ಥಿತಿ.
(ಬೇಸರ; ಸಂತೋಷ; ದುಃಖ)
6. ________ ಗುಣವನ್ನು ವಿದ್ಯಾರ್ಥಿ ಜೀವನದಿಂದಲೇ ರೂಡಿಸಿಕೊಳ್ಳಬೇಕು.
(ಸಮಯ ಹರಣ; ಸಮಯ ಪರಿಪಾಲನೆ; ಸಮಯ ನಷ್ಟ)
7. ನಾವು ________ ಆಯ್ಕೆ ಮಾಡಿದಾಗ ಅದು ನಮ್ಮ ವ್ಯಕ್ತಿತ್ವವನ್ನು ಉನ್ನತಿಗೇರಿಸುತ್ತದೆ.
(ಕೆಡುಕನ್ನು; ಲಾಭವನ್ನು; ಒಳಿತನ್ನು)
8. ಸ್ವಚ್ಚತೆ ಆಂತರಿಕ ________ ಪ್ರತಿಬಿಂಬ.
(ಪ್ರಜ್ಞೆಯ; ಪಾವಿತ್ರತೆಯ; ಕಳಂಕತೆಯ)
9. ಪ್ರತಿಯೊಬ್ಬರಲ್ಲೂ ಅನೇಕ ಹುದುಗಿದ ________ ಗಳಿವೆ.
(ಆಸೆ; ಕನಸು; ಪ್ರತಿಭೆ)
10. ದೈವತ್ವದ ನಂತರ ________ ಪ್ರಧಾನ ಎಂದರು ಜಾನ್‌ವೆಸ್ಲಿ.
(ಹಣಕ್ಕೆ; ನಿರ್ಮಲತೆ; ಸಂಪತ್ತಿಗೆ)

**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿಸಿರಿ : 5x1=5**

1. ಸತ್ಯನಿಗೆ __________ ವಿಷಯದಲ್ಲಿ ಮಾತ್ರ ಯಾವ ಆಸಕ್ತಿಯು ಇರಲಿಲ್ಲ.
2. ನಾವು ಏಕೆ ಮತ್ತು ಹೇಗೆ ನೀತಿವಂತರಾಗಬಹುದೆಂದು ________ ಕಲಿಸುತ್ತದೆ.
3. ಆಳ ಭಾವನೆಗಳುಳ್ಳ ವ್ಯಕ್ತಿ ಮಾತ್ರ ಇತರರ _______ ಗಳನ್ನು ಅರ್ಥ ಮಾಡಿಕೊಳ್ಳಬಲ್ಲ.
4. ನೈಜ ಸಂತೋಷ ____________ ಪರಿಯಂತಹ ಕ್ರಿಯೆ.
5. ಕಾಯಾ, ವಾಚಾ, ಮನಸಾ ಪ್ರವರ್ಧಿಸುವವರು _________ ಜನರು.

**III. ಹೊಂದಿಸಿ ಬರೆಯಿರಿ: 5x1=5**

| | | |
|---|---|---|
| 1. ಪ್ರಾಮಾಣಿಕತೆ | – | ಬೆಲೆ, ಕಿಮ್ಮತ್ತು |
| 2. ಸ್ವಾತಂತ್ರ್ಯ | – | ಸಂತೃಪ್ತಿಯ ಸ್ಥಿತಿ |
| 3. ಮೌಲ್ಯ | – | ಮೌಲ್ಯದ ಮಾನವನಾಗು |
| 4. ಸಂತೋಷ | – | ತಕ್ಕ ಸಂಭಾವನೆ ನೀಡುತ್ತದೆ |
| 5. ಆಲ್ಬರ್ಟ್ ಐನ್‌ಸ್ಟೈನ್ | – | ಜವಾಬ್ದಾರಿ |

**IV. ಈ ಕೆಳಗಿನ ವಾಕ್ಯಗಳು ಸರಿ ಅಥವಾ ತಪ್ಪು ಎಂದು ಬರೆಯಿರಿ : 5x1=5**

1. ಮೌಲ್ಯ ಶಿಕ್ಷಣ ಕೊಡುವುದುರ ಬಗ್ಗೆ ಆಲಕ್ಷ್ಯ ತೋರಬಾರದು.
2. ಸ್ವಾತಂತ್ರ್ಯ ಎಂದರೆ ನಿನಗೆ ಇಷ್ಟ ಬಂದುದನ್ನು ಮಾಡುವುದು.
3. ಪ್ರಾಮಾಣಿಕ ವ್ಯಕ್ತಿಗಳನ್ನು ದೇವರು ಪ್ರೀತಿಸುತ್ತಾರೆ.
4. ಸ್ವಚ್ಛತೆ ಮಾನವನ ಘನತೆ, ಗೌರವವನ್ನು ಸೂಚಿಸುತ್ತದೆ.
5. ಮೌಲ್ಯ ರಹಿತ ಜೀವನ ಉಪಯುಕ್ತವಾಗಿದೆ.

**V. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ: 5x1=5**

1. ರಿಚರ್ಡ್ ಪಾರ್ಟಿಯಲ್ಲಿ ಹೇಗೆ ವರ್ತಿಸಿದನು?
2. ನನ್ನ ಮೌಲ್ಯಗಳು ನಮಗೆ ನೀಡುವ ಸಂದೇಶವೇನು?
3. ಪ್ರಾಮಾಣಿಕತೆ ಅಗತ್ಯವೆಂದು ಏಕೆ ಹೇಳುತ್ತಿ?
4. ಅರ್ಥಭರಿತ ಸ್ವಾತಂತ್ರ್ಯ ಎಂದರೇನು?
5. ಮಾನವ ಜೀವಿಗಳ ಎರಡು ಗುಣಗಳು ಯಾವುವು?

**VI. ಈ ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. ಸ್ವಾತಂತ್ರ್ಯ ಎಂದರೇನು? ಸ್ವಾತಂತ್ರ್ಯವೆಂದರೆ ನೀನೇನು ತಿಳಿದುಕೊಂಡಿದ್ದಿ?
2. ಪ್ರಾಮಾಣಿಕತೆಯ ಸಕರಾತ್ಮಕ ರೂಪಗಳಾವುವು?
3. ಲಿಂಕನ್ ಮತ್ತು ಬಿಥೋವನ್ ಹೇಗೆ ಪ್ರಖ್ಯಾತರಾದರು?



4. ಮರ ಕಡಿಯುವ ಪ್ರಾಮಾಣಿಕ ವ್ಯಕ್ತಿಯಿಂದ ನಾವು ಕಲಿಯುವ ಪಾಠವೇನು?
5. ಮಾನವ ಪ್ರೀತಿಯನ್ನು ವ್ಯಕ್ತಪಡಿಸುವ ನಾಲ್ಕು ಭಾವನೆಗಳನ್ನು ಬರೆಯಿರಿ.
6. ಅವಕಾಶವನ್ನು ಬಳಸಿಕೊಳ್ಳಲು ತೊಡಕಾಗಿರುವ ಅಂಶಗಳಾವುವು?
7. ವಿಧೇಯನಾದ ಸೇವಕ ಏನು ಮಾಡಿದ? ಏಕೆ?

**VII. ಈ ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ: 6x3=18**

1. ವಿವಿಧ ಬಗೆಯ ಮೌಲ್ಯಗಳಾವುವು? ಪ್ರತಿಯೊಂದಕ್ಕೂ ಎರಡು ಉದಾಹರಣೆ ಕೊಡು.
2. ಸಮಾಜ ಕಲ್ಯಾಣವನ್ನು ವರ್ಧಿಸುವ ಆರು ಸದ್ಗುಣಗಳನ್ನು ಬರೆಯಿರಿ.
3. ಸತ್ಯ ಮೌಲ್ಯ ಶಿಕ್ಷಣದ ಬಗ್ಗೆ ಯಾವ ಅಭಿಪ್ರಾಯ ಹೊಂದಿದ್ದನು?
4. ನೀನು ನಿನ್ನನ್ನೇ, ಆತ್ಮ, ಮನಸ್ಸು ಹಾಗೂ ಶರೀರದಲ್ಲಿ ಹೇಗೆ ಶುದ್ಧವಾಗಿ ಕಾಪಾಡಬಹುದು?
5. ನಾವು ಅವಕಾಶಗಳನ್ನು ಏಕೆ ತಪ್ಪಿಸಬಾರದು?
6. "ಆಳ ಭಾವನೆಗಳುಳ್ಳ ವ್ಯಕ್ತಿ ಮಾತ್ರ ಇತರರ ಭಾವನೆಗಳನ್ನು ಅರ್ಥಮಾಡಿ ಕೊಳ್ಳಬಲ್ಲ" ವಿವರಿಸು.
7. ಪ್ರತಿಭೆಗಳೆಂದರೇನು? ನಮ್ಮ ಪ್ರತಿಭೆಗಳನ್ನು ಬಳಸಿಕೊಳ್ಳಲು ತೊಡಕಾಗಿರುವ ಅಂಶಗಳಾವುವು?
8. ಮೌಲ್ಯ ಶಿಕ್ಷಣದ ಉದ್ದೇಶಗಳನ್ನು ಬರೆಯಿರಿ.

**VIII. ಈ ಕೆಳಗಿನ ಎರಡು ವಿಷಯದ ಕುರಿತು ಟಿಪ್ಪಣಿ ಬರೆಯಿರಿ : 2x5=10**

1. ಪ್ರಾಮಾಣಿಕತೆ.
2. ಸ್ವಾತಂತ್ರ್ಯ
3. ಸಂತೋಷ ಒಂದು ಕ್ಷಣಿಕ ಸುಖವಲ್ಲ
4. ಸೌಹಾರ್ದ ಭಾವನೆಗಳು.

**IX. ಟಿಪ್ಪಣಿ ಓದಿ, ಪ್ರಶ್ನೆಗಳನ್ನು ಉತ್ತರಿಸಿರಿ: 2x6=12**

1. ಶ್ಯಾಮಲ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಳು. ಅದೊಂದು ದಿನ ಅವಳ ಬಳಿಯ ಆಸನದಲ್ಲಿ ಅವಳಿಗೆ ಒಂದು ಮೊಬೈಲ್ ಸಿಕ್ಕಿತ್ತು. ಕೆಲವೇ ನಿಮಿಷಗಳ ಹಿಂದೆ ತನ್ನ ಗೆಳತಿಯ ತಾಯಿಯ ಕೈಯಲ್ಲಿ ಇದ್ದ ಮೊಬೈಲ್ ಎಂದು ಅವಳಿಗೆ ತಿಳಿಯಿತು. ಆದರೆ ಶ್ಯಾಮಲ ಅದನ್ನು ಗುಪ್ತವಾಗಿ ತನ್ನಲಿರಿಸಿಕೊಂಡಳು ಮಾತ್ರವಲ್ಲ, ಅದು, ನನ್ನ ಗೆಳತಿಯು